





ಸರಿಯೆನಿಸಿದೆ. ಇಲ್ಲಿ ಕವಿ ಅವನೂ ಹೌದು, ಅವಳೂ ಹೌದು!

ಇನ್ನೊಂದು ಪುಟ್ಟ ಕವಿತೆಯ ಹೆಸರು 'ಟ್ವಿಲೈಟ್ ಲೆಟರ್'. ಇಲ್ಲಿಯೂ ಕವಿ ಕೇಳಲಾಗದ ಸ್ವರ, ಆಡಲಾರದ ಮಾತು, ನಾಲಗೆಗೂ ದಕ್ಕಲಾರದ ರುಚಿ, ಕಣ್ಣಿಗೆ ಕಾಣದ ನೋಟ, ಅನುಭವಕ್ಕೆ ಬಾರದೇ ಹೋದ ಸ್ಪರ್ಶ ಮುಂತಾದ ಪ್ರತಿಮೆಗಳನ್ನೇ ಮತ್ತೆ ಮತ್ತೆ ಬಳಸುವುದು ಕಾಣಿಸುತ್ತದೆ. ಈ ಕವಿತೆಗಳಿಗೆ ಆಗಸದ ನಕ್ಷತ್ರಗಳೊಂದಿಗೆ ಇರುವ ನಂಟು, ರಾತ್ರಿಯ ಕತ್ತಲೆಯೊಂದಿಗೆ ಇರುವ ಸಖ್ಯ, ಮೌನದ ಪಿಸುಗುಡುವಿಕೆಯಲ್ಲಿ ಸಿಗುವ ಸಾಂತ್ವನ, ಗಾಳಿ ನೀಡುವ ನೇವರಿಕೆ ನೆಲದ ಮಣ್ಣಿನಲ್ಲಿ ಕಾಣುತ್ತಿಲ್ಲ, ಸುತ್ತಲಿನ ಮನುಷ್ಯರೊಂದಿಗೆ ಸಿಗುತ್ತಿಲ್ಲ. ಕಾವ್ಯಕ್ಕೆ ಸಾಧ್ಯ ಎನ್ನುವ, ಎಲ್ಲರಿಗೂ ನೆಲ ತಟ್ಟಿ ಇಟ್ಟ ಶಾಪ ಇದು, ಕವಿಗೆ. ಅವನಿಗೆ ಮೇಲೆ ಹೇಳಿದ ಎಲ್ಲವೂ ನಿಲುಕುತ್ತಿದೆ, ಆಗಸದ ನಕ್ಷತ್ರಗಳಷ್ಟೇ ಸಲೀಸಾಗಿ. ಅದೇ ಅವನ ಶಾಪವಾಗಿ ಕಾಡುತ್ತಿದೆ, ಅವನು ಕವಿಯಾಗಿದ್ದಾನೆ. ಇನ್ನೊಂದು ಕವಿತೆಯಲ್ಲಿ ಕುರುಪ್ ಹೇಳುತ್ತಾರೆ, ನಿಜವಾದ ಕವಿತೆಯೊಂದು ಇರುವುದೇ ಆದರೆ ಅದು ಸಾವಿನಲ್ಲಿ ಸಂಧಿಸುತ್ತದೆ ಎಂದು!

ಮತ್ತೊಂದು ಕವಿತೆ ಸ್ವರದ ಸ್ವರ ಕೇಳಲು ಹಾತೊರೆವ ಕಿವಿಯ ತಹತಹದ್ದು. ಹಾವಿನಂತೆ ನಾಲಗೆ ಚಾಚಿ ಸ್ವರವನ್ನು ಕೇಳಬಯಸುವ ಕವಿಗೆ ಕಿವಿಯಿಲ್ಲ ಇಲ್ಲಿ! ನಾಲಗೆಯೇ ಕಿವಿ! ಹಾಗಾಗಿ ಇಲ್ಲೊಂದು ಹಾವಿದೆ, ಅದು ಒಮ್ಮೆ ಬಲಿಯ ನುಂಗಿ ವಿಷವಿಹೀನವಾಗಿದೆ. ಮತ್ತು ಹಾಗಾಗಿ ಅದು ಬಾಯ್ತೆರೆಯಲಾರದೆ ಕಟವಾಯಲ್ಲಿ ರಕ್ತ ಜಿನುಗಿಸುತ್ತ ಬಿದ್ದಿದೆ. ನಾಲಗೆ ಚಾಚಿ ಪಂಚಮದ ಸ್ವರದ ಸ್ವರವನ್ನು ಎಂದೂ ಕೇಳಲಾರದ ಸ್ಥಿತಿಯಲ್ಲಿದೆ. ಇನ್ನೊಮ್ಮೆ ವ್ಯರ್ಥವಾಗದುಳಿದ ವಿಷದಿಂದಾಗಿ ಉಳಿದುಕೊಂಡ ಕವಿಗೂ ನಾಲಗೆ ಚಾಚಿ ಪಂಚಮದ ಸ್ವರದ ಸ್ವರ ಕೇಳಿಸಿಕೊಳ್ಳುವ ಅವಕಾಶವನ್ನು ತೆರೆದಿದೆ. ಆದರೆ ಅವನೋ, ಬೆಳಕೇ ಇಲ್ಲದ ಕಾಂತಿ ಸುರಿಸುವ ನಕ್ಷತ್ರಗಳ ಮೊರೆ ಹೊಕ್ಕಿದ್ದಾನೆ, ಸುರಿವ ಮಳೆಯ ನಾದಕ್ಕೆ ನಾಲಗೆ ಚಾಚಿ ಸ್ವರದ ಸ್ವರ ಕೇಳುವ ಹೊಸರುಚಿಗೆ ಸಜ್ಜಾಗಿದ್ದಾನೆ!

ಅಜಿತನ್ ಜಿ. ಕುರುಪ್ ಅವರ ಕವಿತೆಗಳಿಗೂ ನಾವು ಹೀಗೆಯೇ ಪಂಚೇಂದ್ರಿಯಗಳ ರೂಢಿಗತ ಅಭ್ಯಾಸ ಬದಲಿಸಿ ಕಿವಿಯಿಂದ ಓದುವ, ಕಣ್ಣಿಂದ ಆಘ್ರಾಣಿಸಿ ನಾಲಗೆ ಚಾಚಿ ಕೇಳಿಸಿಕೊಳ್ಳುವ, ಇತ್ಯಾದಿ ಇತ್ಯಾದಿ ಹೊಸ ಬಗೆಗೆ ಸಜ್ಜಾಗಬೇಕಿದೆ. ಅಜಿತನ್ ಅವರ ಸದ್ಯ ಲಭ್ಯವಿರುವ ಎಲ್ಲ ಎಪ್ಪತ್ತೆರಡು ಕವಿತೆಯೂ ಇಂಥ ಸವಾಲು. ಮುಂದಿನ ಪುಟಗಳಲ್ಲಿ ಕೊಡಲಾಗಿರುವ ಎರಡು ಕವಿತೆಗಳ ಅನುವಾದ ಓದುಗರಿಗೆ ಈ ಕವಿಯ ಕಾವ್ಯದ ಪರಿಚಯ ಮಾಡಿಕೊಡಬಹುದು.